ಈ) ರಾಜ್ಯದ ಗಡಿ ಪ್ರದೇಶಗಳಲ್ಲಿ ಅಬಕಾರಿ ಇಲಾಖೆಯ ಜಾರಿ ವಿಭಾಗದ ಸಿಬ್ಬಂದಿಯವರು ಅಕ್ರಮ ಮದ್ಯ ಸಾಗಾಣಿಕೆಯಾಗುವುದರ ಬಗ್ಗೆ ನಿಗಾ ಇಟ್ಟು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಅಧ್ಯಕ್ಷರು : ಉತ್ತರಗಳನ್ನು ಮಂಡಿಸಲಾಯಿತು.

ಮಾನ್ಯ ಯಡಿಯೂರಪ್ಪನವರು, ವಾಟಾಳ್ ನಾಗರಾಜ್‌ರವರು ಹಾಗೂ ಮಾನ್ಯ ಖಿರ್ಗೆಯವರು ಎರಡೆರಡು ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು.

## (3) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

### (ಅ) ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸುವುದು.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಅಣೆಕಟ್ಟನ್ನು ಕಾನೂನು ಚೌಕಟ್ಟಿನಲ್ಲಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ನಾವು ಏನು ಕಟ್ಟುತ್ತಿದ್ದೇವೆ, ಇದರ ಬಗ್ಗೆ ಕಾಲುಕೆರೆದು ಜಗಳವನ್ನು ಮಾಡುವಂಥ ಪ್ರಯತ್ನವನ್ನು ಮಾಡಿದಂಥ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ತಂತಿಯನ್ನು ಕೊಟ್ಟರೋ ಏನೋ ಅದರ ಹಿನ್ನೆಲೆಯಲ್ಲಿ ಮಾನ್ಯ ಪ್ರಧಾನ ಮಂತ್ರಿಯವರು ಸಂಬಂಧಪಟ್ಟ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ಮಾತುಕತೆ ವಿಫಲವಾಯಿತೆಂಬುದನ್ನು ನಾವು ಪತ್ರಿಕೆಗಳಲ್ಲಿ ನೋಡಿದೆವು.ಮಾನ್ಯ ಪ್ರಧಾನಿಯವರೂ ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಅಣೆಕಟ್ಟನ್ನು ಕಟ್ಟುತ್ತಿದ್ದಾರೆ, ನಾನು ಯಾವುದೇ ಒಂದು ರಾಜ್ಯಕ್ಕೆ ಪ್ರಧಾನಿ ಅಲ್ಲ, ಇಡೀ ದೇಶಕ್ಕೆ ನಾನು ಪ್ರಧಾನಿಯಾಗಿರುವುದರಿಂದ ಇದರಲ್ಲಿ ನಾನು ಮಧ್ಯೆ ಪ್ರವೇಶ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಆ ಮಾತನ್ನು ಸ್ವಾಗತಿಸುತ್ತೇನೆ. ಇಲ್ಲಿಗೆ ಈ ಒಂದು ಗಂಡಾಂತರ ಮುಗಿಯಿತು ಎಂದು ನಾನಾದರೂ ಭಾವಿಸಿದ್ದೆ.

ಆದರೆ ಇವತ್ತು, ಮತ್ತೆ ಈ ಆಲಮಟ್ಟಿ ಅಣೆಕಟ್ಟಿನ ಎತ್ತರಕ್ಕೆ ಸಂಬಂಧಿಸಿದಂತೆ ಮಾನ್ಯ ಪ್ರಧಾನಿಯವರ ಮಧ್ಯಸ್ಥಿಕೆಯಲ್ಲಿ ನಡೆದಂಥ ಸಭೆಯ ಮಾತುಕತೆ ವಿಫಲವಾದನಂತರ ಕೇಂದ್ರದ ಸಂಯುಕ್ತ ರಂಗ ಸರ್ಕಾರ ಈ ವಿವಾದವನ್ನು ತೀರ್ಮಾನಿಸಲು ಪಶ್ಚಿಮ ಬಂಗಾಳ, ಬಿಹಾರ್, ಅಸ್ಸಾಂ ಮತ್ತು ತಮಿಳ್ನಾಡು ರಾಜ್ಯಗಳ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಒಂದು ಚಾಲನಾ ಸಮಿತಿಯನ್ನು ರಚನೆ ಮಾಡಿದ್ದಾರೆ. ಇಲ್ಲಿ ನೀರಾವರಿಗೆ ಸಂಬಂಧಪಟ್ಟಂತೆ ನೀರಾವರಿ ಇಲಾಖೆಯ ಬೇಡಿಕೆಯ ಬಗ್ಗೆ ಚರ್ಚೆ ಆಗುತ್ತಿರುವಂಥ ಈ ವಿಶೇಷ ಸಂದರ್ಭದಲ್ಲಿ ಮಾನ್ಯ ನೀರಾವರಿ ಖಾತೆ ಸಚಿವರಿಲ್ಲ, ಅವರೇನಾದರೂ ಡೆಲ್ಲಿಯಲ್ಲಿದ್ದಾರೆಯೇ? ಮಾನ್ಯ ಮುಖ್ಯಮಂತ್ರಿಗಳೂ ಕೂಡ ದೆಹಲಿಯಲ್ಲಿದ್ದರೆ ಅದರ ಗಂಭೀರತೆ ಕೂಡ ನಮಗೆ ಅರ್ಥವಾಗುತ್ತದೆ. ಅವರು ಇಲ್ಲಿ ಇಲ್ಲ ಎಂಬುದಕ್ಕಿಂತ ದೆಹಲಿಯಲ್ಲಿದ್ದಾರೆ ಎಂದು ಹೇಳಿದರೆ, ಇದಕ್ಕೆ ಹೆಚ್ಚಿನ ಮಹತ್ವ ಇದೆ. ನಾವು ಇನ್ನೂ ಗೊಂದಲದಲ್ಲಿದ್ದೇವೆ, ಇನ್ನೊಂದು ಗಂಡಾಂತರಕ್ಕೆ ನಾವು ಸಿಕ್ಕಿಕೊಳ್ಳುತ್ತಿದ್ದೇವೇನೋ ಎಂಬ ಸಂಶಯ ಇವತ್ತು ರಾಜ್ಯದ ಜನತೆಯನ್ನು ಕಾಡುತ್ತಿದೆ, ನಾನಾದರೂ ಇಷ್ಟು ಮಾತ್ರ ಹೇಳುತ್ತೇನೆ. ಇವತ್ತು ಈ ಚಾಲನಾ ಸಮಿತಿಗೆ ಯಾವುದೇ ವಿಧವಾದ ಲೀಗಲ್ ಸ್ಯಾಂಕ್ಷಿಟಿಯು ಕೂಡ ಬರುವುದಿಲ್ಲ, ಇದನ್ನು ನೇಮಕ ಮಾಡುವುದಕ್ಕೆ ಅವರಿಗೆ ಯಾವುದೋ ಒಂದು ಪೊಲಿಟಿಕಲ್ ನೆಸಿಸಿಟಿ ಇರಬಹುದು. ಆದರೆ ನಮ್ಮ ರಾಜ್ಯಕ್ಕೆ ಏನು ಸಂಬಂಧ? ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಾಗಲಿ,

ನೀರಾವರಿ ಮಂತ್ರಿಗಳಾಗಲಿ ಈ 4 ಜನ ಮುಖ್ಯ ಮಂತ್ರಿಗಳ ಚಾಲನಾ ಸಮಿತಿಯ ಮುಂದೆ ಹೋಗಬಾರದೆಂದು ಹೇಳುವವನು ನಾನು. ಅಲ್ಲಿ ಯಾರಿದ್ದಾರೆಂಬುದನ್ನು ತಾವೇ ನೋಡಿ. ಅದರಲ್ಲಿ ತಮಿಳುನಾಡಿನ ಮುಖ್ಯ ಮಂತ್ರಿಗಳಿದ್ದಾರೆ. ಈಗಾಗಲೇ ಕಾವೇರಿ ವಿವಾದದಲ್ಲಿ ನಾವು ಸಿಕ್ಕಿಕೊಂಡು ಒದ್ದಾಡುತ್ತಿದ್ದೇವೆ. ಅವರನ್ನು ಮಧ್ಯಸ್ಥಿಕೆ ಮಾಡಿ ತೀರ್ಮಾನ ಮಾಡುವಂತೆ ಹೇಳುತ್ತಿದ್ದಾರೆ. ಈ ಸುದ್ದಿ ಎಲ್ಲಿಯವರೆಗೆ ಇದೆ ಎಂದರೆ, ನಮ್ಮ ಆಲಮಟ್ಟಿ ಜಲಾಶಯವನ್ನು ನೋಡುವುದಕ್ಕಾಗಿ ಆ 4 ಜನ ಮುಖ್ಯಮಂತ್ರಿಗಳು ಇದ್ದಂಥಾ ಚಾಲನಾ ಸಮಿತಿ ಅಲ್ಲಿಗೆ ಬಂದರೂ ನಾವೇನೂ ಆಶ್ಚರ್ಯಪಡಬೇಕಾಗಿಲ್ಲ. ಅಂಥ ಒಂದು ಪರಿಸ್ಥಿತಿ ಇದೆ.

ಮಾನ್ಯ ಮುಖ್ಯಮಂತ್ರಿಗಳು ವಾಸ್ತವಿಕ ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಯಾರು 2000 ಇಸವಿಯೊಳಗೆ ತನ್ನ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿತ್ತೋ ಅದನ್ನು ಉಪಯೋಗಿಸಿಕೊಂಡಿರುವಂಥ ಆಂಧ್ರಪ್ರದೇಶದವರು ಈಗ ಕಾಲು ಕರೆದುಕೊಂಡು ಜಗಳಕ್ಕೆ ಬರುತ್ತಿರುವಂಥ, ಬ್ಲ್ಯಾಕ್‌ಮೇಲ್ ಮಾಡುವಂಥ ಪ್ರವೃತ್ತಿಯನ್ನು ಮಾಡುತ್ತಿದ್ದಾರೆ. ಹಿಂದೆ ಯಾವುದೋ ಒಂದು ಸಂದರ್ಭದಲ್ಲಿ ತೆಲುಗು-ಗಂಗಾ ಯೋಜನೆಗೆ ನಾವು ಅನುಮತಿಯನ್ನು ಕೊಟ್ಟಿವು. ಅದು ಮದ್ರಾಸ್‌ನವರಿಗೆ ಕುಡಿಯುವ ನೀರಿನ ಸಲುವಾಗಿ ಕೊಟ್ಟಂಥಾದ್ದು. ಅವರು ನಮ್ಮ ಒಳ್ಳೆಯತನವನ್ನು ದುರುಪಯೋಗ ಮಾಡಿಕೊಂಡು ರಾಯಲ ಸೀಮೆಗೆ ಸುಮಾರು 6 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಆ ನೀರನ್ನು ಉಪಯೋಗ ಮಾಡಿಕೊಂಡರು. ಆವತ್ತು ನಾವು ಪ್ರತಿಭಟನೆಯನ್ನು ಮಾಡಲಿಲ್ಲ. ಅಂದರೆ ಹಂತಹಂತವಾಗಿ ಹಿಂದಿನ ಎಲ್ಲ ಘಟನೆಗಳನ್ನು ನೋಡಿಕೊಂಡು ಬಂದರೂ ಒಂದಲ್ಲೊಂದು ಸಂದರ್ಭದಲ್ಲಿ ನಮ್ಮ ರಾಜ್ಯದ ಹಿತವನ್ನು ಪೊಲಿಟಿಕಲ್ ಲಾಭಕ್ಕೋಸ್ಕರ ಬಲಿಕೊಟ್ಟುಕೊಂಡೇ ಬಂದಿದ್ದೇವೆ.

ನಮ್ಮ ಒಂದು ರಾಜಕೀಯ ತೀಟೆಯನ್ನು ತೀರಿಸಿಕೊಳ್ಳುವುದಕ್ಕಾಗಿ ನಮ್ಮ ರಾಜ್ಯದ ಹಿತವನ್ನು ಕೈಬಿಟ್ಟುಕೊಂಡು ಬಂದೆವು. ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಎರಡು ಸಾವಿರದ ಇಸವಿಯೊಳಗೆ ಏನು ನೀರನ್ನು ಉಪಯೋಗ ಮಾಡಿಕೊಳ್ಳಬೇಕೋ ಅದನ್ನು ಉಪಯೋಗಿಸಿಕೊಂಡು ಈಗ ಹೆಚ್ಚುವರಿ ನೀರನ್ನೂ ಕೂಡ ಉಪಯೋಗಿಸಿಕೊಳ್ಳುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೆ ಅದೇ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಸುಮಾರು 200-250 ಟಿ.ಎಂ.ಸಿ. ನೀರನ್ನು ನಾವು ಇನ್ನೂ ಉಪಯೋಗವನ್ನೇ ಮಾಡಿಕೊಳ್ಳದೇ ಇದ್ದೇವೆ, ಮತ್ತು ಇನ್ನೂ ಉಪಯೋಗಿಸಿಕೊಳ್ಳಬೇಕಾದ ಹೆಚ್ಚುವರಿ ನೀರೂ ಕೂಡ ಹರಿದುಹೋಗುತ್ತಿದೆ. ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಆಲಮಟ್ಟಿ ಅಣೆಕಟ್ಟನ್ನು ಎತ್ತರಕ್ಕೆ ಕಟ್ಟಿದರೆ, ಹೆಚ್ಚುವರಿ ನೀರು ಹರಿದು ಹೋಗುತ್ತಿರುವುದು ನಿಂತುಹೋಗುತ್ತದೆ. ಆದರೆ ಈ ರೀತಿ ಕಿರುಕುಳವನ್ನು ಕೊಡುವಂಥ ವ್ಯವಸ್ಥಿತವಾದ ಕೆಲಸವನ್ನು ಅವರು ಮಾಡುತ್ತಾ ಇದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳು ಕರೆದಂಥ ಸಭೆಗೆ ಮಾನ್ಯ ಮುಖ್ಯ ಮಂತ್ರಿಗಳು ಹೋದರು. ಆದರೆ ನಾನು ಹೋಗಲಿಲ್ಲ. ಏಕೆಂದರೆ ಅಲ್ಲಿ 4 ಜನ ಮುಖ್ಯ ಮಂತ್ರಿಗಳ ಮಧ್ಯಸ್ಥಿಕೆಯಲ್ಲಿ ಚರ್ಚೆ ಮಾಡುವುದಕ್ಕೆ ಏನೂ ಉಳಿದಿಲ್ಲ. ನಾವು ಯಾವುದಕ್ಕೂ ಉಲ್ಲಂಘನೆ ಮಾಡಿಲ್ಲ. ಮಾನ್ಯ ಪ್ರಧಾನಿಯವರು ಕರೆದಾಗ ನಾವು ಹೋಗದಿದ್ದರೆ ತಪ್ಪಾದೀತು ಎಂಬ ದೃಷ್ಟಿಯಿಂದ ಮತ್ತು ನಮ್ಮ ನಿಲುವನ್ನು ಸ್ಪಷ್ಟ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹೋಗಿದ್ದಾರೆ, ಹೋಗಿರಬಹುದು. ಮಾನ್ಯ ಪ್ರಧಾನ ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತು ಕೃಷ್ಣಾ ಕಣಿವೆಯಲ್ಲಿ ಕೈಗೊಂಡಿರುವ ಮತ್ತು ಈಗಲೂ ನಡೆಯುತ್ತಿರುವ ಯೋಜನೆಗಳ ಬಗ್ಗೆ 3 ರಾಜ್ಯಗಳೂ ತಮ್ಮ ವರದಿಯನ್ನು ಸಲ್ಲಿಸಬೇಕು, ಅನಂತರ

3 ರಾಜ್ಯಗಳ ನೀರಾವರಿ ತಜ್ಞರೂ ಸೇರಿ ಈ ನೀರಾವರಿಯ ಬಗ್ಗೆ ಚರ್ಚಿಸಬೇಕೆಂದು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದರು. ಅದು ಆಗಬಹುದು. ಆದರೆ ಇವತ್ತು ಆ ನಿಲುವು ಬದಲಾವಣೆ ಆಯಿತು. ನಿಮ್ಮ ಪೊಲಿಟಿಕಲ್ ಆಫೇರ್ಸ್‌ನ ಒಂದು ಕಮಿಟಿಯವರು ಅಲ್ಲಿ ಸೇರಿಕೊಂಡು ಮತ್ತೆ 4 ರಾಜ್ಯಗಳ ಮುಖ್ಯ ಮಂತ್ರಿಗಳೂ ನಮಗೆ ಕಾಜಿ ಪಂಚಾಯಿತಿಯನ್ನು ಮಾಡುವಂಥ ಸಂದರ್ಭ ಇಲ್ಲಿ ಏನು ಬರುತ್ತದೆ? ಬಹುಶಃ ನಮ್ಮನ್ನು ತೆಗೆದುಕೊಂಡು ಹೋಗಿ ಯಾವುದೋ ಒಂದು ಗೊಂದಲಕ್ಕೆ ಸಿಕ್ಕಿಸುತ್ತೀರಿ ಎಂಬುದು ಇವತ್ತು ಬಹಳ ಸ್ಪಷ್ಟವಾಗಿ ಅರ್ಥವಾಗುತ್ತಿದೆ. ಇಂಥ ಒಂದು ಸಂದರ್ಭದಲ್ಲಿ ಮಾನ್ಯ ಪ್ರಧಾನಿಯವರು ಬಹಳ ಸ್ಪಷ್ಟವಾಗಿ ಹೇಳಬೇಕಾಗಿತ್ತು. ಇಲ್ಲಿ ಯಾವುದೇ ಮಾತುಕತೆಗೆ ಅವಕಾಶವಿಲ್ಲ, ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಅವರು ಆಲಮಟ್ಟಿ ಅಣೆಕಟ್ಟನ್ನು ಕಟ್ಟುತ್ತಿದ್ದಾರೆ ಎಂದು ಹೇಳಿದ ಪ್ರಧಾನಿಯವರು ಮತ್ತೆ ನಮ್ಮನ್ನು ಯಾರನ್ನೂ ಕೇಳದೆ ಆ ಚಾಲನಾ ಸಮಿತಿಯನ್ನು ರಚನೆ ಮಾಡಿದ್ದಾರೆ.

ಇವತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನೀರಾವರಿ ಮಂತ್ರಿಗಳು ಆ ಚಾಲನಾ ಸಮಿತಿಯ ಮುಂದೆ ಕೈಕಟ್ಟಿಕೊಂಡು ನಿಂತುಕೊಂಡು ವರದಿ ಸಲ್ಲಿಸುವಂಥ ಪರಿಸ್ಥಿತಿಯನ್ನು ಏನು ಉಂಟು ಮಾಡಿದ್ದಾರೆ, ಈ ಪರಿಸ್ಥಿತಿ ಖಂಡಿತವಾಗಿ ಖಂಡನೀಯವಾದುದು. ಯಾವ ಕಾರಣದಿಂದಲೂ ನಾನು ಇದನ್ನು ಒಪ್ಪುವುದಿಲ್ಲ. ಅವರು ಅಲ್ಲಿಗೆ ಹೋಗುವಂಥ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳಿರುವ ಅನೇಕ ವಿಚಾರಗಳು ಪತ್ರಿಕೆಗಳಲ್ಲಿ ಬಂದಿವೆ. ಬೇರೆ ಬೇರೆ ಪ್ರತಿ ಪಕ್ಷದವರನ್ನು ಕರೆದಿದ್ದರೆ ನಾನೂ ಕೂಡ ಅಲ್ಲಿಗೆ ಹೋಗುತ್ತಿದ್ದೆ. ಆದರೆ ಕೃಷ್ಣಾ ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆ ಬಂದಾಗಲೂ ರಾಜ್ಯ ಸರ್ಕಾರಕ್ಕೆ ಹಣಕಾಸಿನ ತೊಂದರೆ ಇದೆ ಎಂದು ಹೇಳಿದ್ದರೆ ನಾವು ನಮ್ಮ ಜೇಬಿನಿಂದ ಹಣವನ್ನು ಖರ್ಚು ಮಾಡಿಕೊಂಡು ಅಲ್ಲಿಗೆ ಬರುತ್ತಿದ್ದೆವು. ಆದರೆ ನಿಮ್ಮ ಋಣದಲ್ಲಿ ನಾವು ಬರುವುದಕ್ಕೆ ಖಂಡಿತ ಇಷ್ಟಪಡುತ್ತಿರಲಿಲ್ಲ. ರಾಜ್ಯದ ಬಗ್ಗೆ ನಮಗೂ ಕಳಕಳಿ ಇದೆ. ಪ್ರತಿಪಕ್ಷದ ಎಲ್ಲರನ್ನೂ ಒಟ್ಟಿಗೇ ಕರೆದುಕೊಂಡು ಹೋಗಿ ಅಲ್ಲಿ ಏನು ಮಾಡಬಹುದಿತ್ತೋ ಅದನ್ನು ಮಾಡಬಹುದಿತ್ತು. ಅದನ್ನು ಮಾಡದೆ ನಮ್ಮನ್ನು ಒಡೆದು ಆಳುವಂಥ ಪ್ರಯತ್ನವನ್ನು ಏನು ಮಾಡಿದ್ದೀರಿ ಇದು ಆಗುವುದೂ ಇಲ್ಲ, ನಡೆಯುವುದೂ ಇಲ್ಲ. ಇವತ್ತು ನಾನಾದರೂ ಸ್ಪಷ್ಟ ಮಾಡುತ್ತೇನೆ, ಯಾವುದೇ ಕಾರಣಕ್ಕಾಗಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾಗಲಿ ನಮ್ಮ ನೀರಾವರಿ ಮಂತ್ರಿಗಳಾಗಲಿ ಈ ಚಾಲನಾ ಸಮಿತಿಯ ಮುಂದೆ ಹೋಗಬಾರದು.

ಎಲ್ಲಾ ಕೆಲಸ ಕಾರ್ಯಗಳನ್ನೂ ಸ್ಥಗಿತಗೊಳಿಸಿ ನಮ್ಮ ಆಲಮಟ್ಟಿ ಅಣೆಕಟ್ಟನ್ನು ಆದ್ಯತೆಯ ಮೇಲೆ ಎತ್ತರಿಸುವುದಕ್ಕೆ ನಮ್ಮ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು, ಇದನ್ನು ಬಿಟ್ಟು ಬೇರೆ ಇನ್ನಾವುದೇ ರೀತಿಯ ಒಡಂಬಡಿಕೆಗೆ ನೀವು ಒಪ್ಪುವುದಾದರೆ, ಬಹುಶಃ ನಿಮ್ಮ ಯಾವುದೋ ಒಂದು ರಾಜಕೀಯ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕೋಸ್ಕರ ನಮ್ಮ ರಾಜ್ಯದ ಜನತೆಯನ್ನು ಒಂದು ದೊಡ್ಡ ಗಡಿಪಾರಿಗೆ ಸಿಕ್ಕಿಸಿದಂತಾಗುತ್ತದೆ, ಇಂಥ ಒಂದು ಅಪರಾಧವನ್ನು ನೀವು ಮಾಡಬಾರದೆಂಬ ಎಚ್ಚರಿಕೆಯನ್ನು ಕೊಡುತ್ತಾ, ಇವತ್ತೇ ನಮ್ಮ ಆ ಸದನದ ಒಮ್ಮತದ ಅಭಿಪ್ರಾಯವನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು. ಈ 4 ರಾಜ್ಯಗಳ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಏನು ಒಂದು ಚಾಲನಾ ಸಮಿತಿಯನ್ನು ಮಾಡಿದ್ದಾರೆ ಅದರ ಮುಂದೆ ನಮ್ಮವರು ಹೋಗಬಾರದು, ಅಷ್ಟೇ ಅಲ್ಲ ಅವರೂ ಕೂಡ ನಮ್ಮ ರಾಜ್ಯಕ್ಕೆ ಬಂದು ನಮ್ಮ

ನೀರಾವರಿ ಯೋಜನೆಗಳನ್ನು ನೋಡುವುದಕ್ಕೂ ಅವಕಾಶವನ್ನು ಕೊಡಬಾರದೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಖರ್ಗೆಯವರು 2 ನಿಮಿಷಗಳ ತಮ್ಮ ಮಾತುಗಳನ್ನು ಮುಗಿಸಬೇಕು.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಎಷ್ಟು ಕಾಲ ತೆಗೆದುಕೊಂಡರೋ ನಾನೂ ಅಷ್ಟೇ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಅವರು 4 ನಿಮಿಷ ತೆಗೆದುಕೊಂಡಿದ್ದಾರೆ. ಇವತ್ತು ಮಾತನಾಡುವುದಕ್ಕೆ 16 ಜನ ಮಾನ್ಯ ಸದಸ್ಯರು ಕಾಯುತ್ತಿದ್ದಾರೆ. ಅವರೆಲ್ಲರಿಗೂ ಅವಕಾಶ ಕೊಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ನಮ್ಮ ಜೀವನ್ಮರಣದ ಪ್ರಶ್ನೆಯಾಗಿರುವುದರಿಂದ

ಅಧ್ಯಕ್ಷರು : ಇಡೀ ಅಧಿವೇಶನ ಪೂರ್ತಿ ಜೀವನ್ಮರಣವೇ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿನ್ನೆ ರಜೆ ಕೊಡಬೇಕೆಂದು ಹೇಳಿದಾಗ ನಾನು ಅದಕ್ಕೆ ಒಪ್ಪಲಿಲ್ಲ. ಶನಿವಾರವೂ ಸದನ ನಡೆಯಬೇಕೆಂದು ಒತ್ತಾಯ ಮಾಡಿದೆನು. ಮಾನ್ಯ ಅಧ್ಯಕ್ಷರೆ, ಅವತ್ತು ನಾನು ಡೆಲ್ಲಿಯಲ್ಲಿ 3 ಗಂಟೆಯವರೆಗೆ ಇರುವವರೆಗೆ ಒಂದು ಸಮಸ್ಯೆ ಇತ್ತು. ಡೆಲ್ಲಿ ಬಿಟ್ಟ ಮೇಲೆ ಇಲ್ಲಿಗೆ ಬಂದು ಸುದ್ದಿ ನೋಡಿದಾಗ ಪುನಃ ನಮ್ಮ ನಿಲುವಿಗೆ ತೊಂದರೆಯಾಗುತ್ತದೆಂದು ಕಾಣುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಮಾನ್ಯ ಪ್ರಧಾನ ಮಂತ್ರಿಯವರ ಒಂದು ಆದೇಶದ ಮೇರೆಗೆ ಕರೆದಿದ್ದರು. ಆ ಸಭೆಯಲ್ಲಿ ಎಲ್ಲ ಪಕ್ಷದ ಮುಖಂಡರುಗಳನ್ನು ಕೂಡ ಆಹ್ವಾನ ಮಾಡಿದ್ದರು. ವಿಶೇಷವಾಗಿ ಆಂಧ್ರಪ್ರದೇಶದವರು ಎಲ್ಲ ಪಕ್ಷದವರನ್ನು ಕೂಡ ಅವರು ಕರೆದುಕೊಂಡು ಈ ಒಂದು ಸಭೆಗೆ ಹಾಜರಾಗಿದ್ದರು. ಮಹಾರಾಷ್ಟ್ರದವರು ಕೂಡ ಅಲ್ಲಿನ ವಿರೋಧ ಪಕ್ಷದ ನಾಯಕರಾದ, ಕಾಂಗ್ರೆಸ್ ಪಕ್ಷದವರೇ ಇದ್ದಾರೆ ಶ್ರೀ ಮಧುಕರ್ ರಾವ್ ಎಂಬುವವರು, ಮತ್ತು ಇರಿಗೇಷನ್ ಮಿನಿಸ್ಟರ್ ಬಂದಿದ್ದರು. ನಮ್ಮ ಸರ್ಕಾರ ಅದರಲ್ಲೂ ವಿಶೇಷವಾಗಿ ಮುಖ್ಯ ಮಂತ್ರಿಗಳು ಎಲ್ಲ ಪಕ್ಷಗಳ ಎಲ್ಲ ಸದಸ್ಯರನ್ನು ಆಹ್ವಾನ ಮಾಡಿ ಏತಕ್ಕೆ ಕರೆದುಕೊಂಡು ಹೋಗಿಲಿಲ್ಲವೆಂದು ಗೊತ್ತಾಗಲಿಲ್ಲ.

ಆದರೆ ಅಲ್ಲಿ ನಾವು ಮುಟ್ಟಿದ ಮೇಲೆ ನಾವು ಒಬ್ಬರೇ ಉಳಿದವಲ್ಲ ಎಂಬುದು ನಮಗೂ ಕೂಡ ಸ್ವಲ್ಪ ಅಸಮಾಧಾನ ಮತ್ತು ಒಬ್ಬರೇ ಬಂದದ್ದು ಸರಿ ಹೋಗಲಿಲ್ಲ ಎಂದು ಅನ್ನಿಸಿತು. ಆದರೂ ಕೂಡ ಆ ಭಾಗದ ಒಂದು ಹಿತವನ್ನು ಕಾಪಾಡಬೇಕು ಮತ್ತು ಅದರಲ್ಲಿ ವಿಶೇಷವಾಗಿ ಆಲಮಟ್ಟಿ ಡ್ಯಾಂ ನಮ್ಮ ಬಿಜಾಪುರ, ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಭಾಗಗಳಲ್ಲಿ ಹೆಚ್ಚು ಕಡಿಮೆ ನೀರಾವರಿಗೆ ಸಿಗತಕ್ಕ ಸೌಲಭ್ಯ ಇದ್ದ ಕಾರಣ ನಮ್ಮ ಹೇಳಿಕೆಯನ್ನು ನಾವು ಪ್ರಧಾನ ಮಂತ್ರಿಯವರ ಮುಂದೆ ಹೇಳುವುದು ಒಳ್ಳೆಯದು ಎನ್ನತಕ್ಕ ದೃಷ್ಟಿಯಿಂದ ನಾವು ಹೋಗಿದ್ದೇವೆ ಮತ್ತು ನಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದೇರೆ. ಇದರಲ್ಲೇನು ಹಿಂದೆ ಮುಂದೆ ಇಲ್ಲ. ನಾವು ಹೇಳಿರುವ ಹಾಗೆ ಬಚಾವತ್ ಅವಾರ್ಡ್ ಏನಿದೆ, ಆ ಬಚಾವತ್ ಅವಾರ್ಡಿನ ತೀರ್ಪಿನ ಪ್ರಕಾರ ನಾವು ನಡೆದುಕೊಳ್ಳಬೇಕು, ಅದನ್ನು ಯಾವುದೇ ರೀತಿಯಿಂದ ವೈಯಲೇಟ್ ಮಾಡಬಾರದು ಮತ್ತು ನಮಗೆ ಕೊಟ್ಟಂಥ ನೀರಿನ ಷೇರು ಏನಿದೆ 729 ಟಿಎಂಸಿ ನೀರನ್ನು ಅಂದರೆ 5 ಟಿಎಂಸಿ ನೀರನ್ನು ಮದ್ರಾಸಿಗೆ ತೆಲುಗು

ಗಂಗಾ ಯೋಜನೆಯಿಂದ ಕುಡಿಯುವ ಸಲುವಾಗಿ ಕೊಡಲು ಒಪ್ಪಿಕೊಂಡಿದ್ದೇವೆ. ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳತಕ್ಕದ್ದು, ಉಪಯೋಗ ಮಾಡಿಕೊಳ್ಳತಕ್ಕದ್ದು, ಅದು ನಮಗೆ ಬಿಟ್ಟಿದ್ದು.

ಇದಕ್ಕಾಗಿ ನಾವು ಆಲಮಟ್ಟಿ ಡ್ಯಾಮಿನ ಎತ್ತರದ ಆಪ್ರೂವ್ಡ್ ಪ್ಲಾನ್ ಪ್ರಕಾರ ಈಗ ಏನು ಪ್ಲಾನಿಂಗ್ ಕಮಿಷನ್‌ನವರು, ಸೆಂಟ್ರಲ್ ವಾಟರ್ ಕಮಿಷನ್‌ನವರು ಮುಂಚಿತವಾಗಿ ಮಂಜೂರಾತಿ ಕೊಟ್ಟಿದ್ದಾರೆ ಅದನ್ನು ಕನ್‌ಸ್ಟ್ರಕ್ಟ್ ಮಾಡುವುದನ್ನು ನಿಲ್ಲಿಸಬಾರದು ಎಂಬ ಮಾತನ್ನು ನಾವು ಪ್ರಧಾನ ಮಂತ್ರಿಗಳ ಮುಂದೆ ಮತ್ತು ಆ ಒಂದು ಮುಖ್ಯಮಂತ್ರಿಗಳ ಸಭೆಯಲ್ಲಿ ಸ್ಪಷ್ಟಪಡಿಸಿದ್ದೇವೆ. ಅದಕ್ಕೆ ನಮ್ಮ ಮುಖ್ಯ ಮಂತ್ರಿಗಳು ಸ್ಪಂದಿಸಿ ಅವರೂ ಕೂಡ ಅದನ್ನೇ ಹೇಳಿ ನಾನು ಯಾವುದೇ ರೀತಿಯಲ್ಲಿ ಹಿಂದೆ ಹೋಗುವುದಿಲ್ಲ ಎಂದರು. ಬಚಾವತ್ ಅವಾರ್ಡ್ ಪ್ರಕಾರ ನಾವು ಹೋಗುತ್ತೇವೆ, ಆಲಮಟ್ಟಿ ಡ್ಯಾಮಿನ ಎತ್ತರ 728 ಮೀಟರ್ ಏನಿದೆ ಅದನ್ನು ಮಾತ್ರ ನಾವು ಯಾವುದೇ ರೀತಿಯಲ್ಲಿ ಇಳಿಸತಕ್ಕ ಪ್ರಯತ್ನ ಮಾಡುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ. ಆಗ ಇದನ್ನು ಒಪ್ಪದೆ ಶ್ರೀ ಚಂದ್ರಬಾಬು ನಾಯ್ಡು ಅವರು ಹಠ ಹಿಡಿದಿದ್ದು ಬೇಜವಾಬ್ದಾರಿಯುತವಾದದ್ದು ಎಂದು ಹೇಳಬೇಕಾಗುತ್ತದೆ. ಏಕೆಂದರೆ ಅವರ ಒಂದು ಬೇಡಿಕೆ ನೋಡಿದಾಗ ಯಾವುದೂ ಅವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಅಥವಾ ನಮ್ಮ ತೀರ್ಪಿನಲ್ಲಿ ಅವರಿಗೆ ಕೊಡಬೇಕೆಂಬುದು ಇಲ್ಲ, ಅದರ ಬಗ್ಗೆ ಅವರು ಹಠ ಹಿಡಿದು ಕೇಳುತ್ತಿದ್ದರು.

ಅದಕ್ಕಾಗಿ ನಮ್ಮ ಸರ್ಕಾರ ಒಪ್ಪುವುದಕ್ಕೆ ಸಾಧ್ಯವಿಲ್ಲ; ಯಾವ ಪಕ್ಷದವರು ಒಪ್ಪುವುದಕ್ಕೆ ಸಾಧ್ಯವಿಲ್ಲ, ಕರ್ನಾಟಕದ ಜನರು ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ತಮ್ಮ ಇಲ್ಲೀಗಲ್ ಕನ್‌ಸ್ಟ್ರಕ್ಷನ್‌ನಲ್ಲಿ ಈಗಾಗಲೇ ಏನು ಮಾಡುತ್ತಿದ್ದಾರೆ. ತೆಲುಗುಗಂಗಾ ಇರಬಹುದು, ಜುರಾಲಾ ಇರಬಹುದು, ಭೀಮಾ ಲಿಫ್ಟ್ ಇರಿಗೇಷನ್ ಇರಬಹುದು ಅಥವಾ ಉಳಿದಂಥ ತಿರುಚಲಂ ಡ್ಯಾಮಿನ ರೈಟ್ ಬ್ಯಾಂಕ್ ಕೆನಾಲ್ ಮತ್ತು ಲೆಫ್ಟ್ ಬ್ಯಾಂಕ್ ಕೆನಾಲ್ ಇವುಗಳನ್ನು ಬಚಾವತ್ ಅವಾರ್ಡ್ ತೀರ್ಪನ್ನು ವೈಯಲೇಟ್ ಮಾಡಿ ಇವತ್ತು ಕನ್‌ಸ್ಟ್ರಕ್ಟ್ ಮಾಡುತ್ತಿದ್ದಾರೆ. ಅದರ ಬಗ್ಗೆ ಅವರು ಒಂದು ಚೂರು ಕೂಡ ಮಾತನಾಡುವುದಕ್ಕೆ ಸಾಧ್ಯವಿಲ್ಲ. ಕೇವಲ ಆಲಮಟ್ಟಿ ಡ್ಯಾಮಿನ ಬಗ್ಗೆ ಮಾತ್ರ ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಆದರಿಂದ ನಮಗೆ ಏನಾಗುತ್ತಿದೆ ಎಂದರೆ ಹಠಮಾರಿ ಧೋರಣೆಯನ್ನು ಶ್ರೀ ಚಂದ್ರಬಾಬು ನಾಯ್ಡು ಅವರು ತಾಳಿದ್ದಾರೆ ಮತ್ತು ಯುನೈಟೆಡ್ ಫ್ರಂಟ್‌ನಲ್ಲಿ ಇದ್ದ ಕಾರಣ ತಮ್ಮ ಪ್ರಭಾವ ಬೀರಿ ಯಾವುದೇ ರೀತಿಯಿಂದ ಪ್ರಧಾನ ಮಂತ್ರಿಯವರ ಮೇಲೆ ಒತ್ತಡ ತಂದು ಸರ್ಕಾರಕ್ಕೆ ಮಣಿಸಬೇಕೆಂಬ ಒಂದು ಟ್ಯಾಕ್ಟಿಕ್ಸ್ ಉಪಯೋಗ ಮಾಡುತ್ತಿದ್ದಾರೆ. ನಾನು ಅಲ್ಲಿ ಇರುವವರೆಗೆ ಅಂದರೆ 3 ಗಂಟೆಯವರೆಗೆ ನಮ್ಮ ಸರ್ಕಾರ ತಮ್ಮ ನಿಲುವಿನ ಮೇಲೇ ಇದ್ದರು, ಪತ್ರಿಕೆಯಲ್ಲಿ ಕೂಡ ಇದನ್ನೇ ಸ್ಪಷ್ಟಪಡಿಸಿದ್ದಾರೆ. ಅದರಲ್ಲಿ ಯಾವ ವ್ಯತ್ಯಾಸವನ್ನೂ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದರೆ ಯುನೈಟೆಡ್ ಫ್ರಂಟ್ ಸ್ಟೀರಿಂಗ್ ಕಮಿಟಿಯಲ್ಲಿ ರಾತ್ರಿ ಏನು ತೀರ್ಮಾನವಾಗಿದೆ ಎಂದರೆ ಇದು ಅವರ ಪಕ್ಷಕ್ಕೆ ಸಂಬಂಧಪಟ್ಟಿದ್ದು. ಆದರೆ ಈ ಕೃಷ್ಣ ವಾಟರ್ ಡಿಸ್‌ಪ್ಯೂಟ್ ಅನ್ನು ಅಂದರೆ ಅವಾರ್ಡನ್ನು ಇವತ್ತು ಆಲ್ಟರ್ ಮಾಡತಕ್ಕ ಶಕ್ತಿ ಪ್ರಧಾನ ಮಂತ್ರಿಯವರಿಗೆ ಇಲ್ಲ, ಆಮೇಲೇ ಕೋರ್ಟಿಗೆ ಕೂಡ ಇಲ್ಲ.

ಇವತ್ತು ಆ ಅವಾರ್ಡನ್ನು ಆಲ್ಟರೇಷನ್ ಮಾಡತಕ್ಕದ್ದು, ವೈಯಲೇಟ್ ಮಾಡತಕ್ಕದ್ದು, ಬದಲಾವಣೆ ಮಾಡತಕ್ಕದ್ದರ ಬಗ್ಗೆ ಯಾರಿಗೂ ಹಕ್ಕಿಲ್ಲ. ಎಲ್ಲಿಯವರೆಗೆ ಆ ಅವಾರ್ಡಿಗೆ

ಜೀವಂತಿಕೆ ಇದೆ ಅಲ್ಲಿವರೆಗೆ ನಾವೆಲ್ಲರೂ ಅವಾರ್ಡ್ ಹಿಡಿದುಕೊಂಡು ಇವತ್ತಿನ ದಿವಸ ಅದಕ್ಕೆ ಬದ್ಧವಾಗಿ ನಿಂತಿದ್ದೇವೆ. ಆದರೆ ಆ ಅವಾರ್ಡ್ ವೈಯಲೇಟ್ ಮಾಡಿ ಇವತ್ತಿನ ದಿವಸ ನೀರನ್ನು ಕೇಳತಕ್ಕವರು, ಕಾಲು ಕೆರೆದು ಜಗಳ ತೆಗೆಯತಕ್ಕವರು ಶ್ರೀ ಚಂದ್ರಬಾಬು ನಾಯ್ಡು ಅವರಾಗಿದ್ದಾರೆ. ಅದಕ್ಕಾಗಿ ನಮಗೆ ಏನು ಸಂಶಯ ಬರುತ್ತಿದೆ ಎಂದರೆ, ಯುನೈಟೆಡ್ ಫ್ರಂಟ್ ಗವರ್ನಮೆಂಟ್ ಇದ್ದ ಕಾರಣ ಅವರೂ ಕೂಡ ಪಾರ್ಟ್‌ನರ್ ಇದ್ದ ಕಾರಣ ಅಲ್ಲಿ ಇವತ್ತಿನ ದಿವಸ ಒತ್ತಡ ತಂದು 4 ಜನ ಮುಖ್ಯ ಮಂತ್ರಿಗಳು ಅಂದರೆ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಗಳು, ಬಿಹಾರದ ಮುಖ್ಯ ಮಂತ್ರಿಗಳು, ತಮಿಳ್ನಾಡಿನ ಮುಖ್ಯ ಮಂತ್ರಿಗಳು ಹಾಗೂ ಅಸ್ಸಾಮಿನ ಮುಖ್ಯ ಮಂತ್ರಿಗಳು, ಅವರ ಮುಂದೆ ಹೋಗಿ ನಮ್ಮ ಮುಖ್ಯ ಮಂತ್ರಿಗಳು ಏತಕ್ಕೆ ಹೇಳಬೇಕು? ಇದು ರಾಜ್ಯದ ಸಮಸ್ಯೆ, ಪಕ್ಷದ ಸಮಸ್ಯೆ ಅಲ್ಲ. ಪಕ್ಷದಲ್ಲಿ ಆಂತರಿಕವಾಗಿ ಏನಾದರೂ ಜಗಳ ಇದ್ದರೆ, ಏನಾದರೂ ಪೊಲಿಟಿಕಲ್ ಡಿಸ್‌ಪ್ಯೂಟ್ ಇದ್ದರೆ ನೀವು ಸೆಟಲ್ ಮಾಡುವುದಕ್ಕೋಸ್ಕರ ನಿಮ್ಮ ನಿಮ್ಮ ಪಕ್ಷದವರು ನಿಮ್ಮ ನಿಮ್ಮ ಯುನೈಟೆಡ್ ಫ್ರಂಟ್‌ನಲ್ಲಿ ನಿಮ್ಮ ನಿಲುವನ್ನು ಹೇಳಬೇಕು. ಆದರೆ ನಮ್ಮ ರಾಜ್ಯದ ನಿಲುವನ್ನು ಹೇಳಬೇಕು. ಆದರೆ ನಮ್ಮ ರಾಜ್ಯದ ನಿಲುವು ಯಾವುದು ಈಗಾಗಲೇ ಬಚಾವತ್ ಅವಾರ್ಡ್ ಪ್ರಕಾರ ತೀರ್ಮಾನ ಆಗಿದೆ.

ನಮಗೆ ನೀರಿನ ಹಂಚಿಕೆ ಬಂದಿದೆ ಆ ಅವಾರ್ಡ್ ತೆಗೆದುಕೊಂಡು ಮುಖ್ಯ ಮಂತ್ರಿಯಾಗಿ ನೀವು ಅವರ ಮುಂದೆ ಹೋಗಿ ನಾವು ಈ ರೀತಿ ಮಾಡಿದ್ದೇವೆ ಎಂದು ಹೇಳಿಕೊಳ್ಳತಕ್ಕದ್ದು ಸರಿಯಲ್ಲ. ಇದರಿಂದ ನಮ್ಮ ರಾಜ್ಯದ ಗೌರವಕ್ಕೆ ಧಕ್ಕೆ ಬರುತ್ತದೆಂಬ ಮಾತನ್ನು ಕೂಡ ಹೇಳುತ್ತೇನೆ. ಅದಕ್ಕಾಗಿ, ದಯವಿಟ್ಟು ಸ್ಟೀರಿಂಗ್ ಕಮಿಟಿ ಮುಂದೆ ನೀವು ಹೋಗಿ ಅಪೀಲ್ ಕೊಡತಕ್ಕದ್ದು, ಮೆಮೊರ್ಯಾಂಡಂ ಕೊಡತಕ್ಕದ್ದು, ಅವರಿಗೆ ಸಮಜಾಯಿಷಿ ಕೊಡತಕ್ಕದ್ದು ಅಥವಾ ಅಲ್ಲಿನ ಟೀಂ ಬಂದು ಇಲ್ಲಿ ವಿಸಿಟ್ ಮಾಡಿ ಎಂದು ಹೇಳತಕ್ಕದ್ದು ಸರಿಯಲ್ಲ. ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಎಂದು ಸ್ಟೀರಿಂಗ್ ಕಮಿಟಿಯವರು ತೀರ್ಮಾನ ತೆಗೆದುಕೊಂಡರೆ ಅವರಿಗೆ ನೀವು ಸಹಾಯ ಮಾಡಿದರೆ ಅದಕ್ಕೆ ನೀವೇ ಜವಾಬ್ದಾರರಾಗಿರುತ್ತೀರಿ. ಅದಕ್ಕೆ ಈ ಸರ್ಕಾರದವರು ಹೊಣೆಗಾರರು, ನಾವು ಯಾರೂ ಹೊಣೆಗಾರರಲ್ಲ. ನಮ್ಮ ಸಹಕಾರ ಎಲ್ಲಿಯವರೆಗೆ ಇದೆಯೆಂದರೆ ಎಲ್ಲಿಯವರೆಗೆ ನೀವು ಬಚಾವತ್ ಅವಾರ್ಡ ಪ್ರಕಾರ ನಡೆದುಕೊಳ್ಳುತ್ತೀರಿ, ಎಲ್ಲಿಯವರೆಗೆ ಪ್ಲಾನಿಂಗ್ ಕಮಿಷನ್, ಫೈನಾನ್ಸ್ ಕಮಿಷನ್ ಮತ್ತು ವರ್ಲ್ಡ್ ಬ್ಯಾಂಕ್ ಮತ್ತು ಗವರ್ನಮೆಂಟ್ ಆಫ್ ಇಂಡಿಯಾ ಅಪ್ರೂವಲ್ ಏನು ಕೊಟ್ಟಿದ್ದೆ ನಮ್ಮ ಪ್ರಾಜೆಕ್ಟಾಗಿ ಅಥವಾ ಆ ಆಲಮಟ್ಟಿ ಡ್ಯಾಂ ಹೈಟ್‌ಗೆ ಅದಕ್ಕೆ ಮಾತ್ರ ನಾವು ಬದ್ಧರಿದ್ದೇವೆಯೇ ಹೊರತು ಇದರಲ್ಲಿ ಏನಾದರೂ ಡೀವಿಯೇಷನ್ ಆದರೆ ನಮ್ಮ ಪಕ್ಷ ಅಥವಾ ವಿರೋಧ ಪಕ್ಷದವರು ಯಾರೂ ಕೂಡ ಇದಕ್ಕೆ ಬದ್ಧರಲ್ಲ.

ಇದಕ್ಕೆ ನೀವು ನಮ್ಮ ಸಹಕಾರ ಅಪೇಕ್ಷೆ ಮಾಡಿದರೆ ಕೊಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ತಮ್ಮ ಮೂಲಕ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು ಮತ್ತು ಇವತ್ತಿನ ದಿವಸ ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಒಂದು ಹಂತದಲ್ಲಿ ಶ್ರೀ ಜಿ.ಪಿಚ್. ಪಟೀಲ್ ಅವರು ಬಹಳ ಧೈರ್ಯ ಮಾಡಿ ನಾವು ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲವೆಂದು ಹೇಳಿದ್ದು ಸಂತೋಷವಾಯಿತು ಮತ್ತು

ಅವರಿಗೆ ಈ ಸಭೆಯಲ್ಲಿ ನಾವೆಲ್ಲ ಅಭಿವಂದನೆ ಸಲ್ಲಿಸಬೇಕೆಂಬುದು ನನ್ನ ಮನಸ್ಸಿನ ಅಂತರಾಳದ ಇಚ್ಛೆ. ಆದರೆ ಇವತ್ತು ಆ ಮಾತಿಗೆ ತದ್ವಿರುದ್ಧವಾಗಿ ಈ ವಿವಾದಕ್ಕೆ 4 ಜನ ಮುಖ್ಯ ಮಂತ್ರಿಗಳನ್ನೊಳಗೊಂಡ ಒಂದು ಸಮಿತಿ ರಚನೆ ಮಾಡಿ, ಆ ಸಮಿತಿಯ ಮುಂದೆ ಆಂಧ್ರ ಮತ್ತು ಕರ್ನಾಟಕದ ಇಬ್ಬರು ಮುಖ್ಯ ಮಂತ್ರಿಗಳು ಬರಬೇಕೆಂದು ಹೇಳಿರತಕ್ಕದ್ದು ನಮಗೆ ಒಂದು ರೀತಿ ಅತ್ಯಂತ ಸಿಡಿಲು ಬಡಿದ ಹಾಗೆ ಆಗಿದೆ, ಒಳ್ಳೆಯ ವಾತಾವರಣ ನಿರ್ಮಾಣವಾಗಿಲ್ಲ, 4 ಜನರ ಸಮಿತಿಯ ನೇಮಕ ಬಚಾವತ್ ತೀರ್ಪಿಗೆ ವಿರುದ್ಧವಾದದ್ದು, ಬಚಾವತ್ ತೀರ್ಪಿನ ಒಳಗೆ ಬರತಕ್ಕದ್ದಲ್ಲ. ನೀರನ್ನು ಹಂಚಿಕೊಳ್ಳಬೇಕಾದರೆ ಇಂಥ ಸಮಿತಿಗಳನ್ನು ಮಾಡಿ ಈ ಸಮಿತಿಗಳ ಮೂಲಕ ನೀವು ನೀರು ಹಂಚಿಕೊಳ್ಳಬೇಕೆಂದು ಇಡೀ ಬಚಾವತ್ ತೀರ್ಪಿನಲ್ಲಿ ಎಲ್ಲಿಯೂ ಹೇಳಿಲ್ಲ. ಇದು ಸಂಯುಕ್ತ ರಂಗದ ಚಾಲನಾ ಸಮಿತಿ ಬಚಾವತ್ ಸಮಿತಿಯ ವರದಿಯನ್ನು ಚರ್ಚೆಗೆ ಹಾಕಿ ಚಾಲನಾ ಸಮಿತಿ ಮುಂದೆ ನೀವು ಹೋದದ್ದು ಮೊದಲನೆಯ ಅಪರಾಧ ಸಂಯುಕ್ತ ರಂಗ ಸರ್ಕಾರದ ಚಾಲನಾ ಸಮಿತಿ ಮುಂದೆ ಕೃಷ್ಣ ಮತ್ತು ಆಲಮಟ್ಟಿ ಸಮಸ್ಯೆ ಚರ್ಚೆಗೆ ಬಂದಿದ್ದೇ ಒಂದು ಅಪರಾಧ.

11.00 ಎ.ಎಂ

ಅಲ್ಲಿ ಅದನ್ನು ಚರ್ಚೆಗೆ ತರಬಾರದಾಗಿತ್ತು. ಚಾಲನಾ ಸಮಿತಿಗೂ ಆಲಮಟ್ಟಿ ವಿಚಾರಕ್ಕೂ ಬಚಾವತ್ ತೀರ್ಪಿಗೂ ಒಂದಕ್ಕೊಂದಕ್ಕೆ ಸಂಬಂಧವಿಲ್ಲ. ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಬಚಾವತ್ ತೀರ್ಪು ಇರುವಾಗ ಚಾಲನಾ ಸಮಿತಿಗೆ ಏನು ಅಧಿಕಾರವಿದೆ? ಅವರು ಯಾರು ಎಂದು ನಾನು ಕೇಳುತ್ತೇನೆ. ನಾಲ್ಕು ಜನ ಮುಖ್ಯಮಂತ್ರಿಗಳ ಸಮಿತಿಯನ್ನು ನೇಮಿಸುವುದಕ್ಕೆ ಯಾರವರು? ಯಾವ ಕಾರಣಕ್ಕೂ ಆಲಮಟ್ಟಿ ಎತ್ತರವನ್ನು ಏರಿಸದೇ ಬಿಡುವುದಿಲ್ಲ, ಯಾವ ಕಾರಣಕ್ಕೂ ಆಂಧ್ರದ ಒಂದು ಬ್ಲಾಕ್‌ಮೇಲ್ ತಂತ್ರಕ್ಕೆ ಬಲಿಯಾಗುವುದಿಲ್ಲ ಎಂದು ಮುಖ್ಯಮಂತ್ರಿಗಳು ತಮ್ಮ ಸ್ಪಷ್ಟ ನಿಲುವು ಏನು ಹೇಳಿದ್ದಾರೆ ಅದಕ್ಕೆ ನಿಲ್ಲಬೇಕು. ಅಧ್ಯಕ್ಷರೆ, ಇವತ್ತು ಈ ನಾಲ್ಕು ಜನ ಮುಖ್ಯಮಂತ್ರಿಗಳ ಮುಂದೆ ಕರ್ನಾಟಕದ ಮುಖ್ಯಮಂತ್ರಿಗಳು ಹೋಗುವುದನ್ನು ನಾವು ಸ್ಪಷ್ಟವಾಗಿ ವಿರೋಧಿಸುತ್ತೇವೆ. ಆಲಮಟ್ಟಿ ವಿಚಾರದಲ್ಲಿ ಬಚಾವತ್ ತೀರ್ಪು ಅಂತಿಮ. ಈ ವಿಚಾರದಲ್ಲಿ ಬೇರೆ ಮಾತಿಲ್ಲ ಎನ್ನತಕ್ಕ ಮಾತನ್ನು ಹೇಳಿ ಸರ್ವಾನುಮತದ ನಿರ್ಣಯವನ್ನು ಸರ್ಕಾರ ಈಗ ಮಂಡಿಸಬೇಕು. ಮಾನ್ಯ ಸಂಸದೀಯ ಸಚಿವರು ಇಲ್ಲಿದ್ದಾರೆ. ಅವರು ಸರ್ಕಾರದೆ ಪರವಾಗಿ ನಿರ್ಣಯವನ್ನು ಮಂಡಿಸಲಿ ಎನ್ನುವ ಮಾತನ್ನು ನಾನು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಇಲ್ಲ ಅಂದರೆ ನಮಗೆ ಅಪಾಯ ಕಾದಿದೆ. ಅದರಲ್ಲಿ ಬೇರೆ ಮಾತಿಲ್ಲ ಎನ್ನತಕ್ಕದ್ದನ್ನು ಸ್ಪಷ್ಟಪಡಿಸುತ್ತೇನೆ. ಸರ್ಕಾರ ಹೋಗುವಾಗ ಒಂದು ಶಿಷ್ಟಾಚಾರ, ಒಂದು ಒಮ್ಮತ, ಒಂದು ಒಕ್ಕೂಟ ಬೇಕು. ಇದರಲ್ಲಿ ನಮ್ಮನ್ನೆಲ್ಲಾ ಕರೆದುಕೊಂಡು ಹೋಗಬೇಕು ಎಂದು ಇವರಿಗೆ ಕೈಮುಗಿದು ಪ್ರಾರ್ಥನೆ ಮಾಡಿ ಮನವಿ ಸಲ್ಲಿಸುತ್ತೇವೆಂದು ಅಲ್ಲ.

ಅಧ್ಯಕ್ಷರು : ನಿನ್ನೆ ಇದನ್ನು ಹೇಳಿದಿರಿ.

ಶ್ರೀ ವಾಟಾಳ್ ನಾಗರಾಜ್ : ಹೇಳಲಿಲ್ಲ. ನಾನು ಆ ಮಾತನ್ನು ಹೇಳಲಿಲ್ಲ. ನಾನು ಆ ಮಾತಿಗೆ ಹೋಗಲಿಲ್ಲ. ಏಕೆಂದರೆ ನಾನು ಅದನ್ನು ಶುರು ಮಾಡಿದರೆ ಎಲ್ಲೋ ವಾಟಾಳ್ ನಾಗರಾಜ್ ಹೋಗಲಿಲ್ಲ ಎನ್ನುವ ಭಾವನೆ ಬರುತ್ತದಲ್ಲ ಎಂದು ನಾನು ಶುರು ಮಾಡಲಿಲ್ಲ. ನಾನು ಹಿಂದಿನ ಸರ್ಕಾರ ಇದ್ದಾಗ ಈ ಸದನದಲ್ಲಿ ಸದಸ್ಯರಾಗದೇ ಇದ್ದವರನ್ನೂ ಸಿ.ಪಿ.ಐ. ಪಕ್ಷದವರನ್ನು ಕರೆಯಬೇಕು ಎಂದು ಹೇಳಿದ್ದೆ.

ಸಿ.ಪಿ.ಎಂ. ಪಕ್ಷದವರನ್ನು ಕರೆಯಬೇಕು ಎಂದು ಹೇಳಿದ್ದೆ. ಈ ಸದನಕ್ಕೆ ಬರದೇ ಇರತಕ್ಕವರನ್ನೂ ಕರೆಯಬೇಕು ಎಂದು ಹೇಳಿದ್ದೆ. ಆ ಪ್ರಶ್ನೆ ಬೇರೆ. ಕರೆಯುವುದು ಬಿಡುವುದು ನಿಮಗೆ ಸೇರಿರತಕ್ಕಂಥದ್ದು. ಇದು ಗೋಪ್ಯವಾಗಿ ತಮ್ಮದೇ ಸರ್ಕಾರದ ಯಾವುದೇ ಗುಟ್ಟಾದ ವಿಚಾರ ಅಲ್ಲ. ಇದು ಗುಟ್ಟಾದ ವಿಚಾರಕ್ಕೆ ಸೀಮಿತವಲ್ಲ. ನಾನು ತಮಗೆ ಹೇಳುತ್ತಿದ್ದೇನೆ, ಮುಖ್ಯಮಂತ್ರಿಗಳು ದೆಹಲಿಯಿಂದ ಬಂದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು : ಅವರು ಹೇಳಿಕೆ ಮಾಡುತ್ತಾರೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ಸರ್ಕಾರದ ನಿಲುವು ಏನು ಎನ್ನುವ ಬಗ್ಗೆ ಒಂದು ಹೇಳಿಕೆಯನ್ನು ಮಾಡಬೇಕು. ನಾಲ್ಕೂ ಜನ ಮುಖ್ಯಮಂತ್ರಿಗಳ ಮುಂದೆ ಸ್ಪಷ್ಟವಾಗಿ ಹೋಗಕೂಡದು.

ಅಧ್ಯಕ್ಷರು : ಸರಿ ಹೋಗಬಾರದು.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಸಾರಿ ಮಾತನಾಡುವಾಗ ಒಂದೊಂದು ಮಾತು ಜಾಸ್ತಿ ಬರುತ್ತದೆ. ಏನು ಮಾಡುವುದು ಸ್ವಾಮಿ? 1967ರಿಂದ ಈ ಸಭೆಯಲ್ಲಿ ಕುಳಿತುಕೊಂಡಿದ್ದರೂ ಇನ್ನೂ ಒಂದೊಂದು ಸಾರಿ ಸಭೆ ನಡೆವಳಿಕೆ ಗೊತ್ತಾಗುವುದಿಲ್ಲ. ಅದಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ಕ್ಷಮಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಈ ಕಡೆ ಪ್ರತಿಪಕ್ಷಗಳ ಅಭಿಪ್ರಾಯ ವ್ಯತ್ಯಾಸವಾಗಲಿಕ್ಕಿಲ್ಲ. ನನ್ನ ಒಂದೇ ಒಂದು ವಿನಂತಿ ಅಂದರೆ ಕೊನೇ ಪಕ್ಷ ಈ ಸದನದ ವಿರೋಧಪಕ್ಷಗಳ ಒಟ್ಟಾರೆ ಅಭಿಪ್ರಾಯವನ್ನು ತಕ್ಷಣ ಮುಖ್ಯಮಂತ್ರಿಗಳಿಗೆ ಕಮ್ಯುನಿಕೇಟ್ ಮಾಡಬೇಕು. ಈ ಚಾಲನಾ ಸಮಿತಿ ಮುಂದೆ ಮುಖ್ಯಮಂತ್ರಿಗಳು ಹೋಗಬಾರದು. ಎರಡನೆಯದು, ಆ ಸಮಿತಿಯವರು ಏನಾದರೂ ಕರ್ನಾಟಕಕ್ಕೆ ಬಂದರೆ ಬಹುಶಃ ಜನರು ಒಗ್ಗಟ್ಟಿನಿಂದ ಇದ್ದು ಹೋರಾಟ ಮಾಡಿ ಎಂದು ಹೇಳಬೇಕಾಗುತ್ತದೆ. ಹೋರಾಟಕ್ಕೆ ಸಿದ್ಧರಾಗಿ ಎಂದು ಹೇಳಬೇಕಾಗುತ್ತದೆ ಮತ್ತು ಅವರನ್ನು ಈ ಗಡಿಯೊಳಗೆ ಪ್ರವೇಶ ಮಾಡುವುದಕ್ಕೂ ಬಿಡುವುದಿಲ್ಲ. ಆ ರೀತಿ ಕಾರ್ಯಕ್ರಮ ರೂಪಿಸಬೇಕಾಗುತ್ತದೆ. ದಯಮಾಡಿ ಅವರಿಗೆ ತಿಳಿಸಿ.

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಿತ್ರರಾಗಿರತಕ್ಕಂಥ ಯಡಿಯೂರಪ್ಪನವರು, ಖರ್ಗೆಯವರು, ವಾಟಾಳ್‌ರವರು ಈ ವಿಚಾರವನ್ನು ಎತ್ತಿದರು. ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿ ರಾಷ್ಟ್ರದ ಜನರಿಗೆ ಗೊತ್ತಾಗುವ ಹಾಗೆ ಬಚಾವತ್ ಅವಾರ್ಡ್ ತೀರ್ಪಿಗೆ ಅನುಗುಣವಾಗಿ ನಾವೆಲ್ಲರೂ ನಡೆದುಕೊಳ್ಳಬೇಕು ಎನ್ನುವುದನ್ನು ದೆಹಲಿಯಿಂದ ಇಡೀ ರಾಷ್ಟ್ರದ ಉದ್ದಗಲಕ್ಕೂ ಹೇಳಿಯಾಯಿತು. ಚಂದ್ರಬಾಬು ನಾಯ್ಡುರವರು ತೆಗೆದುಕೊಂಡಿರತಕ್ಕ ಕ್ರಮ ರಾಜಕೀಯಕ್ಕೋಸ್ಕರ ರಾಜಕೀಯ ಸ್ಟಂಟ್ಗೋಸ್ಕರ ಎಂದು ಹೇಳುವುದನ್ನು ಬಹಳ ಸ್ಪಷ್ಟವಾಗಿ ಹೇಳಿದರು. ಯಾವುದೇ ಕಾರಣಕ್ಕೂ ಕೂಡ ನಾವು ತೆಗೆದುಕೊಂಡಿರತಕ್ಕ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ನಮ್ಮ 734 ಟಿ.ಎಂ.ಸಿ. ಯಲ್ಲಿ 5 ಟಿ.ಎಂ.ಸಿ. ನೀರನ್ನು ಮದ್ರಾಸಿಗೆ ಕುಡಿಯುವುದಕ್ಕೆ ಬಿಟ್ಟರೆ ಉಳಿದ 729 ಟಿ.ಎಂ.ಸಿ. ನೀರನ್ನು ಉಪಯೋಗಿಸಲಿಕ್ಕೆ ನಮಗೆ ಇರತಕ್ಕ ಹಕ್ಕನ್ನು ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ. ಇವನ್ನೂ ಸ್ಪಷ್ಟವಾಗಿ ಹೇಳಿಯಾಯಿತು. ಇಷ್ಟೆಲ್ಲಾ ನಿಮಗೆ ಆನಂದ ತಂದಿದೆ, ಸಂತಸ ತಂದಿದೆ ಎಂದು ಹೇಳಿ ಆದಮೇಲೆ ಇನ್ನು

3 ಗಂಟೆಯವರೆಗೆ ಈ ನಿಲುವಿತ್ತು. 3 ಗಂಟೆ ಆದಮೇಲೆ ನಿಲುವಿನಲ್ಲಿ ಏನೋ ಬದಲಾವಣೆ, 3 ಗಂಟೆಯವರೆಗೆ ಆಗಿರತಕ್ಕಂಥದ್ದು ಸರ್ಕಾರದ ಸ್ಪಷ್ಟವಾಗಿರತಕ್ಕ ನಿಲುವು. ಇದು ಸರ್ಕಾರದ ನಿಲುವು. ಈ ನಿಲುವನ್ನು ಮುಖ್ಯಮಂತ್ರಿಗಳಾಗಿ ಹೇಳಿರತಕ್ಕಂಥದ್ದು. ಸ್ಟೇರಿಂಗ್ ಕಮಿಟಿಯಲ್ಲಿ ತೆಗೆದುಕೊಂಡಿರತಕ್ಕಂಥ ತೀರ್ಮಾನ ರಾಜಕೀಯವಾಗಿ ಒಂದು ಸ್ಟೇರಿಂಗ್ ಕಮಿಟಿ. ಸಂಯುಕ್ತ ರಂಗ ಸರ್ಕಾರಕ್ಕೆ ಒಂದು ಸ್ಟೇರಿಂಗ್ ಕಮಿಟಿ ಇದೆ. ಚಂದ್ರಬಾಬು ನಾಯ್ಡುರವರು ರಾಜಕೀಯವಾಗಿ ಇದಕ್ಕೊಂದು ಪರಿಹಾರ ಹುಡುಕಬೇಕು ಎನ್ನತಕ್ಕದ್ದನ್ನು ಆಂಧ್ರ ಪ್ರದೇಶದ ಉಚ್ಚ ನ್ಯಾಯಾಲಯದಲ್ಲೂ ಕೂಡ ಹೇಳಿದರು. ನಾನು ಪ್ರಧಾನಿಗಳನ್ನು ಭೇಟಿ ಮಾಡುತ್ತೇನೆ ಮತ್ತು ರಾಷ್ಟ್ರಾಧ್ಯಕ್ಷರನ್ನು ಭೇಟಿ ಮಾಡುತ್ತೇನೆ ಎಂಬ ವಿಚಾರವನ್ನು ಹೇಳಿದರು. ಅವರು ರಾಜಕೀಯವಾಗಿ ಏನು ಬೇಕಾದರೂ ಮಾತನಾಡಿಕೊಳ್ಳಲಿ. ಇವತ್ತು ನಮ್ಮ ಮುಖ್ಯಮಂತ್ರಿಗಳು ಹೋಗುತ್ತಾ ಇರತಕ್ಕಂಥ ಸಂದರ್ಭದಲ್ಲಿ ಸಂಯುಕ್ತರಂಗ ಸರ್ಕಾರಕ್ಕೆ ಜನತಾದಳ ಒಂದು ಪಾಲುದಾರರು.

ಅವರು ಅಲ್ಲಿ ಮಾತುಕತೆ ಮಾಡುತ್ತಾ ಇರುವಂಥದ್ದು ರಾಜಕೀಯ ಮಾತನಾಡತಕ್ಕಂಥ ಅಧಿಕಾರ. ಬಹುಶಃ ಅದೇ ಒಂದು ಚಾಲನಾ ಸಮಿತಿಯವರು ರಾಜಕೀಯವಾಗಿ ಒಂದು ಉತ್ತರವನ್ನು ಕೊಡುತ್ತಾರೆ. ಬಚಾವತ್ ಅವಾರ್ಡ್ ಪ್ರಕಾರ ನಿನಗೇನು ಹಕ್ಕಿದೆ? ನಿಮ್ಮ ನೀರನ್ನು ನೀವು ಉಪಯೋಗಿಸಿಕೊಳ್ಳಿ, ಅವರ ನೀರನ್ನು ಅವರು ಉಪಯೋಗಿಸಿಕೊಳ್ಳಲಿ. ಅದರಲ್ಲೂ ಮುಖ್ಯಮಂತ್ರಿಗಳು ಇನ್ನೂ ಸ್ಪಷ್ಟವಾಗಿ ಹೇಳಿದ್ದಾರೆ, 729 ಟಿ.ಎಂ.ಸಿ. ನೀರಿನ ಮೇಲೆ ಒಂದು ತೊಟ್ಟು ನೀರು ಕೂಡ ಅಂದರೆ ಕ್ಯಾಟಗರಿ-ಎ ಸ್ಕೀಂ-ಎ ನಮಗಿರತಕ್ಕ ಅಧಿಕಾರ ತಾನೆ? ಸ್ಕೀಂ-ಎ-ನಲ್ಲಿ 729 ಟಿ.ಎಂ.ಸಿ. ನೀರನ್ನು ಉಪಯೋಗಿಸುತ್ತೇವೆ. ಸ್ಕೀಂ-ಎ ಒಳಗಡೆ ಅದಕ್ಕಿಂತ ಒಂದು ತೊಟ್ಟು ನೀರನ್ನೂ ಜಾಸ್ತಿ ಉಪಯೋಗಿಸುವುದಕ್ಕೆ ನಾನು ತಯಾರಾಗಿಲ್ಲ. ಸ್ಕೀಂ-'ಬಿ' ಬಂದಾಗ ನೋಡಿಕೊಳ್ಳೋಣ ಎಂದು ಇಷ್ಟೆಲ್ಲಾ ಸ್ಪಷ್ಟವಾಗಿ ಹೇಳಿಯಾದ ಮೇಲೆ ಈಗ ಚಾಲನಾ ಸಮಿತಿ ಬಂದಿರತಕ್ಕಂಥ ಸಂದರ್ಭದಲ್ಲಿ ತಾವು ಹೇಳಿದಿರಿ, ಏನೋ ಒಂದು ಗಂಡಾಂತರ ಬಂದೀತು, ಗಂಡಾಂತರ ಬಂದರೆ ನಾವು ಪಾಲುದಾರರಲ್ಲ, ನಾವು ಅದಕ್ಕೆ ಉತ್ತರ ಹೇಳುವುದಿಲ್ಲ, ನಮ್ಮನ್ನು ಪಾರ್ಟಿಗೆ ನೀವು ಸಿಕ್ಕಿಸಿಕೊಳ್ಳಬೇಡಿ ಎಂದು ಹೇಳಿದ್ದೀರಿ. ಯಾವ ಗಂಡಾಂತರವೂ ಆಗುವುದಿಲ್ಲ. ಮುಖ್ಯಮಂತ್ರಿಗಳು ತೆಗೆದುಕೊಂಡಿರತಕ್ಕಂಥ ಸ್ಪಷ್ಟ ನಿಲುವೇ ಈ ಸರ್ಕಾರದ ನಿಲುವು ಮತ್ತು ಇದಕ್ಕೆ ಇನ್ನೂ ಹೆಚ್ಚು ಹೇಳಬೇಕಾದರೆ ನಾಳೆ ಮುಖ್ಯಮಂತ್ರಿಗಳೇ ಈ ಸದನಕ್ಕೆ ಬಂದು ಇದರ ಬಗ್ಗೆ ಒಂದು ಅಧಿಕೃತವಾದ ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿರ್ಣಯ ಮಂಡಿಸಿ. ನಾವು ನಾಲ್ಕು ಜನ ಮುಖ್ಯಮಂತ್ರಿಗಳ ಮುಂದೆ ಹೋಗುವುದಿಲ್ಲ ಎಂದು ಹೇಳತಕ್ಕಂಥ ಒಂದು ನಿರ್ಣಯ ಮಂಡಿಸಿ.

ಶ್ರೀ ಎಂ.ಸಿ. ನಾಣಯ್ಯ : ನಿರ್ಣಯ ಎಂದು ಹೇಳುವುದು ಎಲ್ಲಿ? ನಿರ್ಣಯದ ಬಗ್ಗೆ ಏನಾದರೂ ವಿವಾದ ಇದ್ದರೆ ತಾನೇ ನಾವು ನಿರ್ಣಯ ತರಬೇಕು? 729 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ಏನಾದರೂ ಬದಲಾವಣೆ ಇದ್ದರೆ ನಾವು ನಿರ್ಣಯ ತರಬೇಕು. ಆದ್ದರಿಂದ 729 ಟಿ.ಎಂ.ಸಿ. ನೀರನ್ನು ಉಪಯೋಗಿಸುವಲ್ಲಿ ಯಾವುದೇ ತರಹದ ವಿವಾದ ಇಲ್ಲ, ಇದು ಉಪಯೋಗಿಸಲೇ ಬೇಕಾಗುತ್ತದೆ. ನಾನು ಇವತ್ತು ಬೆಳಿಗ್ಗೆ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿದ್ದೇನೆ. ನೀವು ಯಾವುದನ್ನು ಕೇಳಬಹುದು ಎನ್ನತಕ್ಕಂಥ ವಿಚಾರವನ್ನೂ ಕೂಡ ಮುಖ್ಯಮಂತ್ರಿಗಳ

ಜೊತೆ ಮಾತನಾಡಿದ್ದೇನೆ. ನಾಳೆ ಮುಖ್ಯಮಂತ್ರಿಗಳು ಬಂದು ಅಧಿಕೃತವಾಗಿ ಇದೇ ಸದನದಲ್ಲಿ ಉತ್ತರವನ್ನು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಲ್ಕು ಜನ ಪ್ರೆಷರೈಸ್ ಮಾಡಿದರೆ ನಿಲ್ಲಿಸಬಾರದು. ಕೆಲವು ವೇಳೆ ಏನಾಗುತ್ತದೆಂದರೆ :

ಅಧ್ಯಕ್ಷರು : ಏನಾಗುವುದಿಲ್ಲ, ಏನೂ ಭಯಪಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರೆಷರೈಸೇಷನ್ ಬಂದರೆ ಅದಕ್ಕೋಸ್ಕರ ನಿಲ್ಲಿಸಬಾರದು.

ಅಧ್ಯಕ್ಷರು : ಏನೂ ಭಯಪಡಬೇಡಿ. ಏನಾಗುವುದಿಲ್ಲ ನಾವೆಲ್ಲಾ ಇದ್ದೇವೆ. ಭಯಪಡಬೇಡಿ, ಧೈರ್ಯವಾಗಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಧೈರ್ಯ ಕೊಟ್ಟರೆ ಸಾಕು.

ಶ್ರೀ ವಾಟಾಳ್ ನಾಗರಾಜ್ : ನಾಲ್ಕು ಜನ ಮುಖ್ಯಮಂತ್ರಿಗಳ ಕಮಿಟಿಯನ್ನು ರಚನೆ ಮಾಡಿದ್ದನ್ನು ನಾನು ಸ್ಪಷ್ಟವಾಗಿ ವಿರೋಧಿಸುತ್ತೇನೆ. ನಾಲ್ಕು ಜನ ಮುಖ್ಯಮಂತ್ರಿಗಳ ಮುಂದೆ ಕರ್ನಾಟಕ ಸರ್ಕಾರ ಹೋಗಬಾರದು ಎನ್ನತಕ್ಕಂಥದ್ದು ನನ್ನ ನಿಲುವು. ಆ ನಾಲ್ಕು ಜನ ಮುಖ್ಯಮಂತ್ರಿಗಳನ್ನು ನೇಮಿಸುವುದಕ್ಕೆ ಬಾಲನಾ ಸಮಿತಿಗೆ ಅಧಿಕಾರವೇ ಇಲ್ಲ. ಕರ್ನಾಟಕವನ್ನು ಕಡೆಗಾಣಿಸಿದ್ದಾರೆ ಎಂದು ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಏಕೆಂದರೆ ಇದು ಬಹಳ ಅನ್ಯಾಯ.

ಅಧ್ಯಕ್ಷರು : ಆಯಿತು, ಸುರೇಶ್ ಕುಮಾರ್ ಅವರೆ ತಾವು ಮಾತನಾಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ನಿನ್ನೆ ಸಂಜೆ ಮಳೆ ಬಂತು.

ಶ್ರೀ ವಾಟಾಳ್ ನಾಗರಾಜ್ : ನಮಗೆ ಕಾವೇರಿಯಲ್ಲಿ ಅನ್ಯಾಯ ಮಾಡಿದ್ದಾರೆ. ಈಗ ಆಲಮಟ್ಟಿಯಲ್ಲಿ ಅನ್ಯಾಯ ಮಾಡುತ್ತಿದ್ದಾರೆ. ನಾಲ್ಕು ಜನ ಮುಖ್ಯಮಂತ್ರಿಗಳನ್ನು ನೇಮಿಸುವುದಕ್ಕೆ ಯಾರು ಅಧಿಕಾರ ಕೊಟ್ಟರು? ಇದು ಅನ್ಯಾಯ. ಇದಕ್ಕಾಗಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭೆಯಿಂದ ನಿರ್ಗಮಿಸಿದರು)

**ಆ) ಬೆಂಗಳೂರಿನ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ತುಂಬಿ ಜನರಿಗೆ ತೊಂದರೆ**

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಮೂರು ಜನ ಚೀಫ್ ಇಂಜಿನಿಯರ್ಗಳು. ಮೂರು ಜನ ಸೂಪರಿಂಟೆಂಡಿಂಗ್ ಇಂಜಿನಿಯರ್ಗಳು. 20 ಜನ ಎಕ್ಸಿಕ್ಯುಟೀವ್ ಇಂಜಿನಿಯರ್ಸ್. 50 ಜನ ಎ.ಇ.ಇ. ಗಳಿದ್ದಾರೆ. ಆದರೆ ನಿನ್ನೆ ಬಂದ ಮಳೆಯ ಕಾರಣ ಇಡೀ ಬೆಂಗಳೂರಿನಲ್ಲಿ ತಗ್ಗು ಪ್ರದೇಶಗಳಲ್ಲಿ ಮನೆಗಳಿಗೆಲ್ಲಾ ನೀರು ನುಗ್ಗಿ ಒಂದೊಂದು ಮನೆಯಲ್ಲಿ 5 ಅಡಿ, 8 ಅಡಿ ನೀರು ನುಗ್ಗಿ ಆ ಜನ ಎಲ್ಲಾ ಇವತ್ತು ನಿರಾಶ್ರಿತರಾಗುವ ಒಂದು ಪರಿಸ್ಥಿತಿ ಬಂದಿದೆ. ಕಾರ್ಪೊರೇಷನ್ನಿನ ಇಂಜಿನಿಯರ್ಗಳು ಯಾವ ಯಾವ ಭಾಗದಲ್ಲಿ ತಗ್ಗು ಪ್ರದೇಶ ಇವೆ. ಅಲ್ಲಿ ಮಳೆ ಬಂದರೆ ಏನು